ನಾನು. ದೇವರೇ ಕಾಪಾಡಿಬಿಟ್ಟ'. ಆಗ ನನಗೂ ಒಂದು ನಂಬಿಕೆ ಬಂತು. ನಾನೂ ಒಳ್ಳೆ ಪಾರ್ಟ್ ಮಾಡಬಲ್ಲವನೇನೋ ಅನ್ನತಕ್ಕ ಒಂದು ನಂಬಿಕೆ ಬಂತು.



◆ **ಈಗ ನೆನಪು ಮಾಡಿಕೊಂಡರೆ, ಯಾವ ಚಿತ್ರದಲ್ಲಿ ಅಭಿನಯಿಸಿದಾಗ ಕಲೆಯ ಬಗೆಗಿನ ಪ್ರಜ್ಞೆ ಬಂತು?**

'ಕನಕದಾಸ' ಚಿತ್ರದಿಂದಲೇ ಬಂತು. ಕನಕದಾಸರು ಆಮೇಲೆ ರಾಘವೇಂದ್ರ ಸ್ವಾಮಿಗಳು ಇವರದ್ದೆಲ್ಲಾ ಅಷ್ಟೆ, ನಾವು ಕಲೆ ಅಂದರೂ ಕೂಡ ಅವರು ಯಾವ ದಾರಿಯಲ್ಲಿ ನಡೆದು ಬಂದರು, ಹೇಗೆ ಬಂದರು, ಯಾವ ರೀತಿ ಬಂದರು ಎಂಬುದನ್ನು ಹೇಳಿದೆವು ಅಷ್ಟೇ. ಒಟ್ಟಿನಲ್ಲಿ ಮನುಷ್ಯನಿಗೆ ಛಲ ಬೇಕು. 'ಛಲ ಬೇಕು ಶರಣಂಗೆ ಪರಧನನೊಲ್ಲೆಂಬ, ಛಲ ಬೇಕು ಶರಣಂಗೆ ಪರದೈವನೊಲ್ಲೆಂಬ, ಛಲ ಬೇಕು ಶರಣಂಗೆ ಪರಸತಿಯನೊಲ್ಲೆಂಬ ಛಲ ಬೇಕು' ಎಂದು ಬಸವಣ್ಣನವರು ಹೇಳ್ತಾರಲ್ಲ! ಅದು ಮುಖ್ಯ. ಜನಗಳ ಪ್ರೇಮ ಮುಖ್ಯ. ಮಮತೆ ವಿಶ್ವಾಸ ಹೆಚ್ಚಿದಷ್ಟೂ ನಮಗೆ ಭಯ ಜಾಸ್ತಿಯಾಗುತ್ತದೆ. ಕಲೆ ಏನು? ಅದನ್ನು ಕಂಡುಹಿಡಿಯುವುದು ಹೇಗೆ? ಇದು ಬಹಳ ದೊಡ್ಡದಾದ, ವಿಶಾಲವಾದ ವಿಷಯ. ನೋಡಿದಷ್ಟೂ ಆಳ ಇದ್ದೇ ಇದೆ. ಇದಕ್ಕೆ ಕೊನೆ ಎಲ್ಲಿದೆ?

◆ **ಕಲೆಯ ಬಗ್ಗೆ ಇನ್ನೂ ಸ್ವಲ್ಪ ಓದಿಕೊಂಡಿದ್ದರೆ ಚೆನ್ನಾಗಿತ್ತು ಅಂತ ನಿಮಗೆ ಅನಿಸುತ್ತದೆಯಾ?**

ಅನಿಸುತ್ತೆ.

◆ **ಯಾವಾಗ ಅನಿಸುತ್ತೆ?**

ಅದೇ, ಅನಿಸುತ್ತೆ ಅಂದೆ ಅಷ್ಟೆ (ನಗು), ಓದಿಕೊಂಡಿದ್ದರೆ ಚೆನ್ನಾಗಿತ್ತು ಅಂತ ಆಗಾಗ ಅನಿಸುತ್ತೆ.

◆ **ಫಾರ್ಮಲ್ ಎಜುಕೇಷನ್ ಎನ್ನುವುದು ಏನೋ ಒಂದು ಕೊರತೆ ಅನಿಸುವುದಿಲ್ಲವೆ?**

ಹೌದು, ನಾನು ಪ್ರತಿಯೊಂದು ಕಡೆಯಲ್ಲೂ ಹೇಳುತ್ತೇನೆ, ನಾನು ಅವಿದ್ಯಾವಂತ ಅಂತ.

◆ **ಅದಲ್ಲ, ಕಲೆಯ ವಿಷಯವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದರೆ, ಅದೊಂದು ಜ್ಞಾನ ಇದ್ದಿದ್ದರೆ, ಚೆನ್ನಾಗಿ ಇರುತ್ತಿತ್ತೋ ಏನೋ ಅನಿಸುವುದಿಲ್ಲವೆ?**

ಅದಕ್ಕೇನು ಸಾರ್, ಎಷ್ಟು ಜ್ಞಾನ ಇದ್ದರೂ ಅದಕ್ಕೆ ಕೊನೆ ಎಲ್ಲಿದೆ ಹೇಳಿ? ಇಷ್ಟೇ ಜ್ಞಾನ ಇದ್ದರೆ ಸಾಕು ಎನ್ನುವುದಕ್ಕೆ ಧೈರ್ಯ ಎಲ್ಲಿದೆ? ಎಷ್ಟು ಜ್ಞಾನ ಇದ್ದರೂ ಸಾಲದು, ಇನ್ನೂ ಬೇಕು, ಜ್ಞಾನ ಬೆಳೆಯುತ್ತಲೇ ಇರಬೇಕು.

◆ **ನೀವು ಕಲೆಯ ಬಗ್ಗೆ ಜ್ಞಾನಾರ್ಜನೆಗೆ ಕಂಡುಕೊಂಡ ಮಾರ್ಗ ಯಾವುದು?**

ಹೀಗೆ, ಜನತೆ... ನಾವು ಒಬ್ಬೊಬ್ಬರ ಹತ್ತಿರವೂ ಹೋಗುತ್ತಿರುತ್ತೇವೆ. ಅವರು ಹೇಗೆ? ಚಿತ್ರ ಹೇಗೆ? ಸ್ಟೋರಿ ಹೇಗೆ? ಒಂದೊಂದು ಪಾತ್ರವೂ ಹೀಗೇ ಇರಬೇಕು, ಒಂದೇ ಎರಡೇ? ಹೇಳುವುದಕ್ಕಾಗುವುದಿಲ್ಲ. ಹೀಗೆ ಮಾಡುವಾಗ ಎಷ್ಟೋ ಅಭಿಮಾನಿಗಳ ಪ್ರೇಮ ಹೇರಳವಾಗಿ ಸಿಗುತ್ತದೆ. ಇದೆಲ್ಲ ನಮಗೆ ಹೇಗೆ ಗೊತ್ತಿತ್ತು? ನಮ್ಮನ್ನು ಒಳ್ಳೆಯವರನ್ನು ಮಾಡಬೇಕಾದರೂ, ಕೆಟ್ಟವರನ್ನು ಮಾಡಬೇಕಾದರೂ ಸಮಾಜ ತಾನೆ ಕಾರಣ? (ನಗು).

**'ಪದ್ಮಭೂಷಣ' (1983) ಅಭಿನಂದನಾ ಗ್ರಂಥದಲ್ಲಿನ ಸಂದರ್ಶನದಿಂದ ಆಯ್ದ ಭಾಗ**